

ಪಿನ್ನವಾಲದ ಆನೆಗಳ ಶಿಬಿರ



ಸ್ವಚ್ಛತೆಯನ್ನೇ ಶೋಭೆಯಾಗಿಸಿಕೊಂಡ ಕ್ಯಾಂಡಿ ನಗರ

ದೂರದಲ್ಲಿದ್ದ ಹೋಟೆಲ್‌ಗೆ ಬಂದು, ಮತ್ತೆ ಪ್ರಯಾಣ ಮಾಡಬೇಕಾಗಿದ್ದರಿಂದ ಮಲಗಲು ಹೋಗದೆ, ಬೆಳಗಿನ ನಿತ್ಯಕರ್ಮಗಳನ್ನು ಮುಗಿಸಿ, ಹೋಟೆಲ್‌ನಲ್ಲಿ ತಿಂಡಿ ತಿಂದ ನಂತರ, ನಮಗಾಗಿ ವ್ಯವಸ್ಥೆಯಾಗಿದ್ದ ಮಿನಿ ಬಸ್ಸಿನಲ್ಲಿ ತೂಕಡಿಸುತ್ತಾ ಅಲ್ಲಿಂದ ಮೂರು ಗಂಟೆಗಳ ದೂರದಲ್ಲಿರುವ 'ಕ್ಯಾಂಡಿ' ಎನ್ನುವ ಸ್ಥಳಕ್ಕೆ ಬಂದು ತಲುಪಿದೆವು.

ಕ್ಯಾಂಡಿ ಎಂಬ ಪದ ಕೇಳಿದಾಗ ಥಟ್ಟನೆ ನನಗೆ ನೆನಪಾಗಿದ್ದು ನಾವು ಚಿಕ್ಕಂದಿನಲ್ಲಿ ತಿನ್ನುತ್ತಿದ್ದ ಕ್ಯಾಂಡಿ ಅಥವಾ ಐಸ್‌ಕ್ಯಾಂಡಿ. ಎರಡನೆಯದು, ಶ್ರೀಲಂಕಾದಲ್ಲಿ ಟೆಸ್ಟ್ ಕ್ರಿಕೆಟ್ ನಡೆಯುವಾಗ ಕ್ಯಾಂಡಿ ಟೆಸ್ಟ್ ಎಂಬ ಪದ ಆಗಾಗ್ಗೆ ಕಿವಿಯ ಮೇಲೆ ಬೀಳುತ್ತಿದ್ದುದು.

ಎತ್ತ ನೋಡಿದರೂ ಹಸಿರು ಕಾಡು, ಬೆಟ್ಟಗುಡ್ಡ ಕಣಿವೆಗಳು, ಇವುಗಳ ಮಧ್ಯೆ ಕ್ಯಾಂಡಿ ಎಂಬ ಊರು. ಹಾವಿನಂತೆ ತಿರುವುಗಳುಳ್ಳ, ಪುಟ್ಟದಾದ, ಆದರೆ ಸ್ವಚ್ಛವಾದ ರಸ್ತೆಗಳು, ಗುಡ್ಡದ ಇಳಿಜಾರಿನಲ್ಲಿ ವೃಕ್ಷಗಳ ನಡುವೆ ಮನೆಗಳು. ಒಟ್ಟಿನಲ್ಲಿ ಶ್ರೀಲಂಕಾವು ಹೊರನೋಟಕ್ಕೆ ನಮ್ಮ ಕೇರಳದ ಜೆರಾಕ್ಸ್ ಕಾಪಿ ಎನಿಸಿತು. ಮನೆಯ ಸುತ್ತಮುತ್ತ ಇರುವ ವೃಕ್ಷ ಸಂಪತ್ತು ಸಾಲದೆಂಬಂತೆ ಮನೆಗಳ ಹಜಾರದಲ್ಲಿ, ಪೋರ್ಟಿಕೋದಲ್ಲಿ, ಕಾಂಪೌಂಡ್ ಹಾಗೂ ಕಿಟಕಿಗಳ ಮೇಲೆಲ್ಲಾ ವಿವಿಧ ಬಗೆಯ ಪುಟ್ಟ ಸಸ್ಯರಾಶಿ, ಹೂಬಳ್ಳಿಗಳು ನಿಜಕ್ಕೂ ನಯನ ಮನೋಹರ. ಇಲ್ಲಿಯ ಜನರ ಪ್ರಕೃತಿಪ್ರೇಮಕ್ಕೆ ಒಂದು ಸಲಾಮ್ ಹೇಳಬೇಕೆನಿಸಿತು.

ಇಲ್ಲಿ ಎದ್ದುಕಾಣುವ ಮತ್ತೊಂದು ವಿಷಯವೇನೆಂದರೆ ಕ್ಯಾಂಡಿ ಮಾತ್ರವಲ್ಲ ಶ್ರೀಲಂಕಾದಲ್ಲಿ ಎಲ್ಲಾ ಕಡೆ ಸ್ವಚ್ಛತೆಗೆ ಆದ್ಯತೆ ನೀಡಲಾಗಿದೆ. ಸಣ್ಣ ಪುಟ್ಟ ಗಲ್ಲಿಗಳಲ್ಲಿ, ರಸ್ತೆಗಳಲ್ಲಿ ಕಸವಾಗಲಿ, ಕಾಗದದ ಚೂರುಗಳಾಗಲಿ, ಪ್ಲಾಸ್ಟಿಕ್ ಬಾಟಲುಗಳಾಗಲೀ ನಮಗೆ ಕಾಣಲಿಲ್ಲ. ನಮ್ಮಲ್ಲಿರುವಂತೆ ಇಲ್ಲಿ ಎಲ್ಲೂ ವಿಶಾಲವಾದ ರಸ್ತೆಗಳಾಗಲಿ ಹೆದ್ದಾರಿಗಳಾಗಲಿ ಕಾಣಲಿಲ್ಲ. ಎಲ್ಲಾ ಕಡೆ ಪುಟ್ಟ ಪುಟ್ಟ ರಸ್ತೆಗಳಿವೆ. ಸ್ವಲ್ಪಮಟ್ಟಿಗೆ ಟ್ರಾಫಿಕ್ ಸಮಸ್ಯೆ ಇದ್ದರೂ, ಒಂದರ ಹಿಂದೆ ಒಂದು ವಾಹನಗಳು ಸಾಲುಗಟ್ಟಿ ನಿಂತಿದ್ದರೂ ಯಾರೂ ಹಾರ್ನ್ ಮಾಡದೆ, ಒಬ್ಬರ ಮೇಲೊಬ್ಬರು ಹರಿಹಾಯದೆ, ರೇಗದೆ, ತಾಳ್ಮೆಯಿಂದ ಕಾಯುವುದು ಸೋಜಿಗವೆನಿಸಿತು. ಇಲ್ಲಿಯ ಜನಗಳ ಮುಖದಲ್ಲಿ ಒಂದು ರೀತಿಯ ಶಾಂತಿ ನೆಲೆಸಿದೆ. ಇದು ಬಹುಶಃ ಬುದ್ಧನ ಪ್ರಭಾವ ಇರಬೇಕು ಎನಿಸಿತು. ನಮ್ಮಲ್ಲಿ ಅಲ್ಲಲ್ಲಿ ದೇವಸ್ಥಾನಗಳು ಕಂಡುಬರುವಂತೆ ಇಲ್ಲಿ ಎಲ್ಲೆಲ್ಲೂ ಬುದ್ಧನ ಪ್ರತಿಮೆಗಳು ಕಾಣಿಸುತ್ತವೆ. ಇಲ್ಲಿ ಶೇಕಡ ಎಪ್ಪತ್ತರಷ್ಟು ಜನ ಬೌದ್ಧಧರ್ಮವನ್ನು ಅನುಸರಿಸುವವರು. ಮಿಕ್ಕವರು ಹಿಂದೂ, ಮುಸಲ್ಮಾನ್ ಹಾಗೂ ಕ್ರಿಶ್ಚಿಯನ್ ಧರ್ಮದವರು.

ಕ್ಯಾಂಡಿಯಲ್ಲಿ ಬುದ್ಧನ ಹಲ್ಲಿನ ದೇವಾಲಯ (Buddha's Tooth Relic Temple) ಪ್ರಮುಖ ಆಕರ್ಷಣೆ. ಬುದ್ಧನು ಭಾರತದಲ್ಲಿ ಮರಣ ಹೊಂದಿದ ನಂತರ ಉತ್ತರ ಪ್ರದೇಶದ ಖುಶಿ ನಗರದಲ್ಲಿ ಅವರ ಅಂತ್ಯಸಂಸ್ಕಾರವಾಗುತ್ತದೆ. ಆ ಸಮಯದಲ್ಲಿ ಚಿತಾಭಸ್ಮದಲ್ಲಿ ಸಿಕ್ಕ ಒಂದು ಹಲ್ಲನ್ನು ಭಾರತದಿಂದ ಇಲ್ಲಿಗೆ 4ನೇ ಶತಮಾನದಲ್ಲಿ ದಂತ ಎನ್ನುವ ಯುವರಾಜ ಮತ್ತು ಹೇಮಾಮಾಲ ಎನ್ನುವ ಯುವರಾಣಿ (ತನ್ನ ತಲೆಕೂದಲಿನ ಒಡವೆಯಲ್ಲಿ ಬಚ್ಚಿಟ್ಟುಕೊಂಡು) ಸಾಗಿಸಿದರಂತೆ. ಬುದ್ಧನ ಆ ಹಲ್ಲನ್ನು ಬಂಗಾರದ ಪೆಟ್ಟಿಗೆಯಲ್ಲಿಟ್ಟು, ಅದನ್ನು ಮತ್ತೆ ಏಳು ಪೆಟ್ಟಿಗೆಗಳಲ್ಲಿ ಭದ್ರವಾಗಿ ಮುಚ್ಚಿಟ್ಟು ರಕ್ಷಿಸಲಾಗಿದೆ. ಆ ಪ್ರಾಂತ್ಯದ ಆಡಳಿತದ ಚುಕ್ಕಾಣಿ ಹಿಡಿದ ರಾಜರು ಬದಲಾದಂತೆಲ್ಲಾ ರಾಜಧಾನಿಗಳು ಬದಲಾಗಿ, ಆ ಹಲ್ಲು ಕೂಡ ಸುಮಾರು ಎರಡು ಶತಮಾನಗಳ ಕಾಲ ರಾಜರುಗಳ ಜೊತೆಯಲ್ಲಿ ಶ್ರೀಲಂಕಾದ ಹಲವಾರು ಊರುಗಳಿಗೆ ಸ್ಥಳಾಂತರಗೊಂಡು ಕೊನೆಗೆ 18ನೇ ಶತಮಾನದ ಮೊದಲ ಭಾಗದಲ್ಲಿ ವೀರ ಪರಾಕ್ರಮ ನರೇಂದ್ರಸಿಂಘೆ ಎಂಬ ರಾಜನು ಕ್ಯಾಂಡಿಯಲ್ಲಿ ಬುದ್ಧನ ಈ ಹಲ್ಲಿಗಾಗಿ ಬೃಹತ್ ಮಂದಿರವನ್ನು ನಿರ್ಮಿಸಿ, ಅದು ಇಲ್ಲಿ ನೆಲೆ ನಿಲ್ಲುವಂತೆ ಮಾಡಿದ.

ಪ್ರಪಂಚದ ಮೂಲೆ ಮೂಲೆಗಳಿಂದ ಬೌದ್ಧ ಧರ್ಮದವರು ಮತ್ತು ಪ್ರವಾಸಿಗರು ಇದರ ದರ್ಶನಕ್ಕಾಗಿ ಬರುತ್ತಾರೆ. ಸಂರಕ್ಷಿಸಿಡಲಾದ ಆ ಹಲ್ಲನ್ನು ಪೆಟ್ಟಿಗೆಯಿಂದ ಪ್ರತಿ ಹನ್ನೆರಡು ವರ್ಷಕ್ಕೊಮ್ಮೆ ತೆರೆದು ತೋರಿಸಲಾಗುತ್ತದೆಯಂತೆ. ಈ ವರ್ಷದ ಏಪ್ರಿಲ್‌ನಲ್ಲಿ ಈ ಪೆಟ್ಟಿಗೆಯನ್ನು ತೆರೆಯಲಾಗಿತ್ತು. ಇದಲ್ಲದೆ ವರ್ಷಕ್ಕೊಮ್ಮೆ